ಇದರ ವರ್ಷವಾರು ಹಾಗೂ ಸಾಮರ್ಥ್ಯವಾರು ವಿವರಗಳು ಈ ಕೆಳ ಕಂಡಂತಿವೆ:–

ವರ್ಷ	ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯ			
	25 ಕೆ.ವಿ.ಎ	63 ಕೆ.ವಿ.ಎ	100 ಕೆ.ವಿ.ಎ	ಒಟ್ಟು
2008–09	110	20	12	142
2009–10	199	20	7	226
2010–11	55	18	7	80
2011–12 (ಫೆಬ್ರವರಿ 12 ರವರೆಗೆ)	60	28	21	109
ಒಟ್ಟು	**424**	**86**	**47**	**557**

ಕುಂಭಕಲಾ ಅಭಿವೃದ್ಧಿ ಮಂಡಳಿಯ ಯೋಜನೆಗಳ ಅನುಷ್ಠಾನ

50 (321) ಶ್ರೀ ಮುನಿರಾಜು ಎಸ್. (ದಾಸರಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಜಾತಿಯಾದ ಕುಂಬಾರರ ಸಮುದಾಯಕ್ಕೆ ಇವರ ಮೂಲ ಕುಲಕಸುಬು ವೃತ್ತಿಯ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಇವರಿಗಾಗಿಯೇ ಪ್ರತ್ಯೇಕ ಕುಂಬಕಲಾ ಅಭಿವೃದ್ಧಿ ಮಂಡಳಿಯನ್ನು ಅಸ್ಥಿತ್ವಕ್ಕೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗಿನಿಂದ ಅಸ್ಥಿತ್ವಕ್ಕೆ ತರಲಾಗಿದೆ. ಇದರ ವ್ಯಾಪ್ತಿ ಕಾರ್ಯಸ್ವರೂಪಗಳೇನು (ಇದರ ಇತ್ತೀಚಿನ ಚಟುವಟಿಕೆಗಳ ವಿವರ ಗಳನ್ನು ಜಿಲ್ಲಾವಾರು ಮಾಹಿತಿ ಒದಗಿಸುವುದು);

ಇ) ಈ ಮಂಡಳಿಯನ್ನು ಪ್ರತ್ಯೇಕವಾಗಿ ಗುರುತಿಸಿ ಪ್ರತ್ಯೇಕ ಸ್ವತಂತ್ರ ನಿಗಮವಾಗಿ ಪರಿವರ್ತಿಸಲಾಗಿದೆಯೇ, ಅಥವಾ ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ವ್ಯಾಪ್ತಿಗೊಳಪಡಿಸಲಾಗಿದೆಯೇ, ಇದಕ್ಕೆ ಕಾರಣಗಳೇನು;

ಈ) ಇವರಿಗಾಗಿಯೇ ಪ್ರತ್ಯೇಕ ಮಂಡಳಿ ಅಸ್ಥಿತ್ವಕ್ಕೆ ತಂದಿರುವಾಗ ಇದನ್ನು ಬೇರ್ಪಡಿಸಿ ಆ ವೃತ್ತಿಯಲ್ಲಿ ಅಥವಾ ಸಮುದಾಯ ಸಂಘಟನೆಯಲ್ಲಿ ಗುರುತಿಸಿಕೊಂಡಿರುವ ಅನುಭವಿ ಅರ್ಹರಾದ ಪರಿಣತ ತಜ್ಞರಿರುವ ಅಧ್ಯಕ್ಷರನ್ನೊಳಗೊಂಡ ಆಡಳಿತ ಮಂಡಳಿಯನ್ನು ರಚಿಸಿ ನೇಮಕಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಉ) ಇದಕ್ಕಾಗಿ ಇದುವರೆಗೂ ರಾಜ್ಯ ಸರ್ಕಾರವು ನೀಡಿರುವ ಅನುದಾನವೆಷ್ಟು, ಬಜೆಟ್‌ನಲ್ಲಿ ನಿಗಧಿಪಡಿಸಿದ್ದ ಮೊತ್ತವೆಷ್ಟು, ಈಗಾಗಲೇ ನಿಗಮದ ವತಿಯಿಂದ ವಿವಿಧ ಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಖರ್ಚು ಮಾಡಿರುವ ಮೊತ್ತದ ವಿವರಗಳನ್ನು ಸಾಧಿಸಿರುವ ಪ್ರಗತಿಯೊಂದಿಗೆ ಜಿಲ್ಲಾವಾರು ಮಾಹಿತಿ ಒದಗಿಸುವುದು;

ಊ) ಇದುವರೆಗೂ ಇದರ ಆಡಳಿತ ಮಂಡಳಿ ಎಷ್ಟು ಸಭೆಗಳು ಜರುಗಿವೆ, ಇದರಲ್ಲಿರುವ ಸದಸ್ಯರುಗಳು ಯಾರ್ಯಾರು ಹೊರ ರಾಜ್ಯಗಳ ಪ್ರವಾಸ ಸೇರಿದಂತೆ ಈ ತನಕ ಕೈಗೊಂಡಿರುವ ತೀರ್ಮಾನಗಳೇನು ಇವುಗಳನ್ನು ಕಾರ್ಯಾನುಷ್ಠಾನಗೊಂಡಿರುವವುಗಳು ಯಾವುವು?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು) :

ಅ) ಹೌದು.

ಆ) ಕುಂಭಕಲಾ ಅಭಿವೃದ್ಧಿ ಮಂಡಳಿಯು ದಿನಾಂಕ: 14/06/2010 ರಿಂದ ಅಸ್ಥಿತ್ವಕ್ಕೆ ಬಂದಿರುತ್ತದೆ.

ಕುಂಬಾರಿಕೆ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು ಇದರ ಮುಖ್ಯ ಚಟುವಟಿಕೆ ಯಾಗಿರುತ್ತದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಿದೆ.

ಇ) ಕುಂಬಾರಿಕೆ ಅಭಿವೃದ್ಧಿಯ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಮಂಡಳಿಯು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಈ) ಕುಂಬಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಮೇಲ್ವಿಚಾರಣೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮಂಡಳಿಯನ್ನು ರಚಿಸಲಾಗಿದೆ. ಈ ಮಂಡಳಿಯಲ್ಲಿ ಕುಂಭಾರಿಕೆ ಸಮಾಜದ 04 ಪ್ರತಿನಿಧಿಗಳನ್ನು ನಾಮ ನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಉ) ಇದುವರೆಗೂ ಸರ್ಕಾರವು 2010–11ರ ಪಾಲಿಗೆ 300.00 ಲಕ್ಷ ರೂ.ಗಳನ್ನು 2011–12ರ ಸಾಲಿಗೆ 500.00 ಲಕ್ಷ ರೂ.ಗಳನ್ನು ಕುಂಭಾರಿಕೆ ಅಭಿವೃದ್ಧಿ ಯೋಜನೆಗೆ ಒದಗಿಸಿದೆ ಇದರಲ್ಲಿ 730.17 ಲಕ್ಷ ರೂ.ಗಳನ್ನು ಯೋಜನೆಯ ಅನುಷ್ಠಾನಕ್ಕೆ ವೆಚ್ಚ ಮಾಡಿ 2727 ಜನರಿಗೆ ಸೌಲಭ್ಯ ಒದಗಿಸಿದೆ. ಜಿಲ್ಲಾವಾರು ವೆಚ್ಚದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಊ) ರಾಜ್ಯಮಟ್ಟದ ಕುಂಭಾರಿಕೆ ಅಭಿವೃದ್ಧಿ ಮಂಡಳಿಯು ಒಟ್ಟು 04 ಸಭೆಗಳನ್ನು ನಡೆಸಲಾಗಿದೆ. ಕುಂಭಾರಿಕೆ ಅಭಿವೃದ್ಧಿ ಮಂಡಳಿಯ ಈ ಕೆಳಕಂಡಂತೆ ಅಧ್ಯಕ್ಷರು ಮತ್ತು ಸದಸ್ಯರನ್ನು ಒಳಗೊಂಡಿರುತ್ತದೆ.

ಅ)	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ.	ಅಧ್ಯಕ್ಷರು
ಆ)	ಆಯುಕ್ತರು,, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	ಸದಸ್ಯರು
ಇ)	ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	ಸದಸ್ಯ ಕಾರ್ಯದರ್ಶಿ
ಈ)	ಆಯುಕ್ತರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
ಉ)	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ	ಸದಸ್ಯರು
ಊ)	4 ಜನ ಕುಂಬಾರ ಸಮಾಜದ ಪ್ರತಿನಿಧಿಗಳು (ಸರ್ಕಾರದಿಂದ ನಾನು ನಿರ್ದೇಶಿತರಾದವರು)	ಸದಸ್ಯರು

ಕುಂಭಾರಿಕೆ ಅಭಿವೃದ್ಧಿ ಮಂಡಳಿಯು ಕುಂಭಾರಿಕೆ ಅಭಿವೃದ್ಧಿಗೆ ಸಾಲ ಮತ್ತು ಸಹಾಯಧನ ಒದಗಿಸುವ ಯೋಜನೆಯನ್ನು ರೂಪಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ. ಯೋಜನೆ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸ ಲಾಗುತ್ತದೆ. ಕುಂಬಾ ಸಮಾಜದ ಪ್ರತಿನಿಧಿಗಳ ಹಾಗೂ ಒಕ್ಕೂಟಗಳ ಪ್ರತಿನಿ ಧಿಗಳ ಸಭೆಯ ಕರೆದು ಯೋಜನೆಯ ಅನುಷ್ಠಾನದ ಬಗ್ಗೆ ಚರ್ಚಿಸಲಾಗಿ ರುತ್ತದೆ. ಮಂಡಳಿಯು ಹೊರರಾಜ್ಯಗಳಾದ ಉತ್ತರಾಂಚಾಲ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಕುಂಭಾರಿಕೆ ಕಾರ್ಯ ಕ್ರಮಗಳ ಅಧ್ಯಯನ ಮಾಡಲು ಕುಂಬಾರ ಪ್ರತಿನಿಧಿಗಳನ್ನು ಒಳಗೊಂಡ 04 ಅಧ್ಯಯನ ತಂಡಗಳನ್ನು ರಚಿಸಿ ಅಧ್ಯಯನ ಪ್ರವಾಸದ ಕಾರ್ಯ ಕ್ರಮವನ್ನು ರೂಪಿಸಲಾಗಿದೆ. ಈ ತಂಡಗಳು ಏಪ್ರಿಲ್–2012ರ ಮಾಹೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ನಮೂನೆ–1

ಕುಂಬಾರಿಕೆ ಅಭಿವೃದ್ಧಿ ಸಾಲ ಯೋಜನೆಯಲ್ಲಿ 2010–11 ಮತ್ತು 2011–12ರ ಸಾಧಿಸಿದ ಪ್ರಗತಿ

(ಲಕ್ಷ ರೂ.ಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	2010–11ರ ಸಾಧನೆ		2011–12ರ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	5	6
1	ಬೆಂಗಳೂರು ನಗರ	27	8.10	146	43.80
2	ಬೆಂಗಳೂರು ಗ್ರಾ	20	5.1	37	9.25
3	ರಾಮನಗರ	29	7.75	48	12.00
4	ಶಿವಮೊಗ್ಗ	13	3.90	52	14.20
5	ತುಮಕೂರು	61	18.30	90	27.00
6	ಚಿತ್ರದುರ್ಗ	26	6.80	80	20.00
7	ಕೋಲಾರ	57	8.55	62	15.50
8	ಚಿಕ್ಕಬಳ್ಳಾಪುರ	37	8.20	92	13.80
9	ದಾವಣಗೆರೆ	31	9.30	62	15.50

10	ಮೈಸೂರು	–	–	125	37.50
11	ಮಂಡ್ಯ	–	–	24	6.00
12	ಚಾಮರಾಜನಗರ	28	8.40	40	10.00
13	ಉಡುಪಿ	17	5.10	58	16.25
14	ಹಾಸನ	20	6.00	53	15.90
15	ಚಿಕ್ಕಮಗಳೂರು	22	3.42	43	15.75
16	ದಕ್ಷಿಣ ಕನ್ನಡ	22	6.60	74	18.50
17	ಕೊಡಗು	1	0.30	5	1.50
18	ಬೆಳಗಾಂ	63	18.90	134	38.40
19	ಹಾವೇರಿ	29	7.60	45	13.50
20	ಗದಗ	26	7.40	23	5.75
21	ಬಿಜಾಪುರ	16	4.80	58	17.40
22	ಬಾಗಲಕೋಟೆ	18	5.40	57	14.25
23	ಧಾರವಾಡ	29	8.70	55	16.50
24	ಉತ್ತರ ಕನ್ನಡ	30	9.00	60	18.00
25	ಗುಲ್ಬರ್ಗಾ	40	12.00	89	22.25
26	ಬಳ್ಳಾರಿ	47	11.50	97	19.40
27	ಬೀದರ್	26	7.80	39	11.70
28	ರಾಯಚೂರು	17	5.10	66	16.50
29	ಕೊಪ್ಪಳ	23	6.90	52	15.60
30	ಯಾದಗಿರಿ	21	6.30	45	11.25
	ಒಟ್ಟು	**796**	**217.22**	**1931**	**512.95**